

# ನವಿಲುಗರಿ ಕಲೆ

★ ಆರ್. ಸವಿತ

ನವಿಲು ನಮ್ಮ ರಾಷ್ಟ್ರೀಯ ಪಕ್ಷಿ. ನವಿಲಿನ ನರ್ತನ ನೋಡಲು ಚೆನ್ನ, ನವಿಲುಗರಿಯಂತೂ ಇನ್ನಷ್ಟು ಇಷ್ಟ. ರಾಜಮಹಾರಾಜರ ಕಾಲದಲ್ಲಿ ನವಿಲುಗರಿಯ ಬೀಸಣಿಕೆ ಮತ್ತು ಅಲಂಕಾರಿಕ ವಸ್ತುಗಳಾಗಿ ನವಿಲುಗರಿಯನ್ನು ಉಪಯೋಗಿಸಿದ್ದನ್ನು ಗಮನಿಸಿದ್ದೇವೆ.

ಉತ್ತರಭಾರತದ ದಾಂಡಿಯಾ ನೃತ್ಯದಲ್ಲಿ ನವಿಲುಗರಿಯಿಂದ ಮಾಡಿದ ಅಲಂಕಾರಿಕ ಕೋಲು (ದಾಂಡಿಯಾ) ಗಳನ್ನು ಉಪಯೋಗಿಸುವುದು ಪದ್ಧತಿ. ಕೃಷ್ಣನ ಕಿರೀಟದಲ್ಲಿ ರಾರಾಜಿಸುವ ನವಿಲುಗರಿಯಂತೆ, ಮಕ್ಕಳ ತಲೆಗೆ ಒಂದು ನವಿಲುಗರಿ ಸಿಕ್ಕಿಸಿದರೆ ನಮ್ಮ ಮನೆಯಲ್ಲೊಂದು 'ಪುಟ್ಟ ಕೃಷ್ಣ' ಎನ್ನುವುದು ಸಹಜ.

ಈಗಂತೂ ಮಾರುಕಟ್ಟೆಯಲ್ಲಿ ನವಿಲುಗರಿಯಿಂದ ಮಾಡಿದ ಕಿವಿಯೋಲೆ, ಸರ, ಪೋಟೋ ಫ್ರೇಮ್, ಕೃತಕ ನವಿಲು ಎಲ್ಲವೂ ದೊರೆಯುತ್ತದೆ. ನವಿಲಿನ ರಂಗೋಲಿ, ನವಿಲಿನ ನೈಲ್ ಆರ್ಟ್, ಅಲಂಕರಿಸಿಕೊಂಡ ನವಿಲಿನ ಕಣ್ಣುಗಳು– ಹೀಗೆ ನವಿಲಿನ ಚಿತ್ರವನ್ನು ಉಪಯೋಗಿಸುವುದು ನಡೆದಿದೆ.

ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್, ತಿಂಗಳಲ್ಲಿ ನವಿಲು ತನ್ನ ಗರಿಗಳನ್ನು ಉದರಿಸುತ್ತದೆ. 35 ಇಂಚು ಉದ್ದದಿಂದ ಚಿಕ್ಕ ಗರಿಯವರೆಗೂ ನವಿಲುಗರಿಗಳಿರುತ್ತವೆ. ಅಲ್ಲದೆ ಅರ್ಧ ಭಾಗಿದ ತುದಿಯಲ್ಲಿ ನವಿಲಿನ ಕಣ್ಣಿರುವ ಗರಿಗಳೂ ದೊರೆಯುತ್ತವೆ.

ಈ ನವಿಲುಗರಿಗಳಿಂದ ಬಾಗಿಲ ತೋರಣ, ಹೂವಿನ ಬೊಕ್ಕೆಗಳು. ಹೂದಾನಿ, ಆರತಿ–ತಟ್ಟೆಗೆ ನವಿಲುಗರಿಯ ಅಲಂಕಾರಗಳನ್ನು ಮಾಡಬಹುದು.

ಬೊಕೆ: 12 ಉದ್ದದ 9 ನವಿಲುಗರಿಗಳನ್ನು ಕತ್ತರಿಸಿಕೊಳ್ಳಿ. ಉಳಿದ ಕಡ್ಡಿಗಳನ್ನು ಹಾಗೇ ಇಟ್ಟುಕೊಳ್ಳಿ. 8 ಉದ್ದದ 8 ಗರಿಗಳನ್ನು ಕತ್ತರಿಸಿಕೊಂಡು, ಕಡ್ಡಿಗಳನ್ನು ಇಟ್ಟುಕೊಳ್ಳಿ. ಜರ್‌ಬೆರಾ ಹೂಗಳು–5, ಹೂದಾನಿ–1, ಪ್ಲೋರಲ್‌ಪೋಮ್ –1 ದೊಡ್ಡ ತುಂಡು. ಥರ್ಮೊಕೋಲ್ ಬಾಲ್ಸ್ 1/4 ಕಪ್, ಅಂಟು,

ವಿಧಾನ: ಕತ್ತರಿಸಿ ಉಳಿದ ಕಡ್ಡಿಗಳ ತುದಿಗೆ ಅಂಟು ಹಚ್ಚಿ, ಥರ್ಮೊಕೋಲ್ ಬಾಲ್ಸ್‌ಗಳನ್ನು ಎಲ್ಲಾ ಕಡ್ಡಿಗಳಿಗೂ ಅಂಟಿಸಿ ಆರಲು ಬಿಡಿ. ಹೂದಾನಿಗೆ ನೀರಿನಲ್ಲಿ ಅದ್ದಿದ ಪ್ಲೋರಲ್ ಪೋಮನ್ನು ಇಟ್ಟು ಹೊಂದಿಸಿ 9 ಉದಗರಿಗಳನ್ನು ಚಿತ್ರದಲ್ಲಿರುವಂತೆ ನವಿಲುಗರಿಗಳನ್ನು ನವಿಲಿನ ಅರ್ಧರೆಕ್ಕೆಯಂತೆ ಹೂದಾನಿಯಲ್ಲಿ ಸಿಕ್ಕಿಸುತ್ತಾ ಬನ್ನಿ, ಚಿಕ್ಕ ಅಳತೆಯ ನವಿಲುಗರಿಗಳನ್ನು ಮೊದಲಿನ ಎರಡು ರೆಕ್ಕೆಗಳ ಮಧ್ಯೆ ಬರುವಂತೆ ಸಿಕ್ಕಿಸಿ. ಎಡಭಾಗದಲ್ಲಿ ಉಳಿದ ಅರ್ಧ ರೆಕ್ಕೆಯ ಭಾಗದಲ್ಲಿ ಬಾಲ್ಸ್ ಅಂಟಿಸಿರುವ ನವಿಲು ಗರಿಯ ಕಡ್ಡಿಗಳನ್ನು ಸಿಕ್ಕಿಸುತ್ತಾ ಬನ್ನಿ, ಒಂದಕ್ಕೊಂದು ಬಣ್ಣ ಹೊಂದುವಂತೆ ಇರಲಿ. ಬೊಕ್ಕೆಯ ಮಧ್ಯದಲ್ಲಿ ಜರ್‌ಬೆರಾಹೂಗಳನ್ನು ಅಂದವಾಗಿ ಜೋಡಿಸಿ. ಚೆಂದದ ನವಿಲುಗರಿಯ ಜೊತೆಗೆ ಅದರ ಕಡ್ಡಿಗಳನ್ನು ಉಪಯೋಗಿಸಿ ಸಿದ್ಧ ಮಾಡಿದ ಬೊಕ್ಕೆ ಸಿದ್ಧವಾಯಿತು.

ನವಿಲುಗರಿಯ ತೋರಣ:

3 ಉದ್ದದ ನವಿಲುಗರಿ –7 2 ಉದ್ದದ ನವಿಲುಗರಿಗಳು 14. 5 ಜರ್‌ಬೆರಾ ಹೂಗಳು. ಎರಡೂ ಕಡೆ ಅಂಟು ಇರುವ ಗಮ್ ಟೇಪು

ವಿಧಾನ: ಮೊದಲು 3 ಉದ್ದದ ನವಿಲುಗರಿಯನ್ನು ಗಮ್ ಟೇಪಿನ ಮೇಲೆ ಅಂಟಿಸಿ, ಎರಡೂ ಪಕ್ಕಗಳಲ್ಲಿ 2 ಉದ್ದದ ಗರಿಗಳನ್ನು ಅಂಟಿಸಿ, ನಂತರ ಒಂದು ಜರ್‌ಬೆರಾಹೂ ಅಂಟಿಸಿ, ಹೀಗೆ ಪೂರ್ತಿ ತೋರಣ ಮಾಡಿ, ಬಾಗಿಲ ಮೇಲೆ ತೋರಣವನ್ನು ಅಂಟಿಸಿ.

ಆರತಿ ತಟ್ಟೆಗೆ ಅಲಂಕಾರ:

ಬೇಕಾದದ್ದು: 2 ಉದ್ದ ಕತ್ತರಿಸಿದ ನವಿಲುಗರಿಗಳು – 15, ಗುಲಾಬಿ ಹೂಗಳು 8, ದೀಪ–1, ಅಂಟು.

ವಿಧಾನ: ಒಂದು ತಟ್ಟೆಯ ಅಂಚಿಗೆ ಅಂಟು ಅಂಟಿಸಿ, ಸುತ್ತಲೂ ಗರಿಗಳನ್ನು ಅಂಟಿಸಿ, ಇದರ ಮಧ್ಯೆ ಗುಲಾಬಿ ಹೂಗಳನ್ನು ದುಂಡಗೆ ಜೋಡಿಸಿ, ಮಧ್ಯೆ ಒಂದು ದೀಪ ಇಡಿ. ಆರತಿತಟ್ಟೆಯ ಅಲಂಕಾರ ನೋಡಲು ಚೆನ್ನ.

ಶ್ರೀ ರಾಘವೇಂದ್ರ ಜ್ಯೋತಿಷ್ಯಾಲಯ



ಪಂಡಿತ
ಶ್ರೀ ಎಂ. ಬಿ. ಜೋಶಿ
ಪ್ರಸಿದ್ಧ ಜ್ಯೋತಿಷ್ಯರು
ಶ್ರೀ ರಾಘವೇಂದ್ರ ಸ್ವಾಮಿ ಉಪಾಸಕರು
ಶ್ರೀ ಚೌಡೇಶ್ವರಿದೇವಿ ಆರಾಧಕರು
9611002265
ಹಸ್ತ ರೇಖೆ, ಮುಖ ಲಕ್ಷಣ ಮತ್ತು ಭಾವಚಿತ್ರದ ಮೇಲೆ ನಿಮ್ಮ ಭವಿಷ್ಯವನ್ನು ನಿಖರವಾಗಿ ನುಡಿಯುತ್ತಾರೆ. ವಿದ್ಯೆ, ಪರೀಕ್ಷೆ, ಉದ್ಯೋಗ, ಪ್ರಮೋಶನ್, ವಿದೇಶ ಪ್ರವಾಸ, ಪ್ರೇಮ ಪ್ರಕರಣ ಸಂತಾನ ಪ್ರಾಪ್ತಿ, ಸಾಲ ಮುಕ್ತಿ, ರೋಗಗಳು ಲಕ್ಷ್ಮೀ ಯೋಗ, ಭಾಗ್ಯೋದಯ, ಸ್ತ್ರೀವಶೀಕರಣ, ಪುರುಷ ವಶೀಕರಣ ಮಾಟ-ಮಂತ್ರ, ನಿವಾರಣೆ, ಮದುವೆ, ಅಡ-ತಡೆ, ನ್ಯಾಯಾಲಯ ಪ್ರಕರಣಗಳು, ವಿವಾಹ ವಿಚ್ಛೆದನ ಮುಂತಾದ
ಇನ್ನೂ ಅತೀ ಜಟೀಲ ಸಮಸ್ಯೆಗಳಿಗೆ ಅತೀ ಶೀಘ್ರ ಪರಿಹಾರ ಮಾಡುತ್ತಾರೆ.
ಅನೇಕ ರಾಜಕೀಯ ಗಣ್ಯರು, ಉದ್ಯಮಿಗಳು, ನೌಕರಸ್ಥರು, ಜೋಶಿಯವರಿಂದ ಲಾಭ ಪಡೆದಿರುತ್ತಾರೆ.
ನೀವು ಹಲವಾರು ಜ್ಯೋತಿಷ್ಯರನ್ನು ಕೇಳಿ ನಿಮ್ಮ ಸಮಸ್ಯೆಗಳಿಗೆ ಪರಿಹಾರ ಸಿಗದೆ ನೊಂದಿದ್ದರೆ ಅಂತಹ ಯಾವುದೇ ಕಠಿಣ ಸಮಸ್ಯೆಗಳಿದ್ದರು ಪರಿಹಾರ ಶತಸಿದ್ಧ.
ನಿಮ್ಮ ಸಮಸ್ಯಗಳನ್ನು ಗುಪ್ತವಾಗಿ ಇಡಲಾಗುವುದು.
ಆಫೀಸ : ಧಮ್ಮಣಗಿ ಪ್ರೆಸ್ಟೀಜ್ ಪ್ಲಾಜಾ ಎಫ್ 13, ಹೊಟೇಲ ಆಯೋಧ್ಯ ಪಕ್ಕದಲ್ಲಿ, ಹಳೇ ಬಸ್‌ಸ್ಟ್ಯಾಂಡ್ ಎದುರು, ಹುಬ್ಬಳ್ಳಿ.
ಮನೆ : ಶ್ರೀ ಶ್ರೀನಿವಾಸ ಅನುಗ್ರಹ ಪಿ.ಎನ್.ಟಿ. ಕಾಲನಿ, ಹೇಮಂತನಗರ, ಕೇಶ್ವಾಪುರ, ಹುಬ್ಬಳ್ಳಿ-23.
0836-2282265
E-mail: mbjoshiastro@gmail.com